## 7

# ದೇವರ ಕಟ್ಟಡ

*"ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" (ಎಫೆಸ 2:21, 22).*

ಹಳೇ ಒಡಂಬಡಿಕೆಯ ಯುಗದಲ್ಲಿ ಕಟ್ಟಡ ಕಟ್ಟುವ ಅತಿ ದೊಡ್ಡ ಸಾಹಸವು ಕರ್ತನಿಗಾಗಿ ಸೊಲೊಮೋನನು ಆಲಯವನ್ನು ಕಟ್ಟಿಸಿದ್ದಾಗಿರುತ್ತದೆ. "ಕರ್ತನಿಗಾಗಿ ಮನೆಯನ್ನು" ಕಟ್ಟುವ ಉದ್ದೇಶವು ದಾವೀದನಿಂದ ಮೊದಲು ವ್ಯಕ್ತಪಡಿಸಲ್ಪಟ್ಟಿತು. ದಾವೀದನು ಯುದ್ಧದ ಮನುಷ್ಯನಾಗಿದ್ದುದರಿಂದ ಅವಕಾಶವು ಸೊಲೊಮೋನನಿಗೆ ಕೊಡಲ್ಪಟ್ಟಿದೆ ಎಂದು ನಾತಾನನ ಮುಖಾಂತರ ದೇವರು ದಾವೀದನಿಗೆ ಹೇಳಿದನು (2 ಸಮುವೇಲ 7:5; 1 ಪೂರ್ವಕಾಲವೃತ್ತಾಂತ 28:3). ಹೀಗಿದ್ದರೂ, ದಾವೀದನು ತಾನು ಸಾಯುವದಕ್ಕಿಂತ ಮೊದಲು ದೇವಾಲಯವನ್ನು ಕಟ್ಟುವದಕ್ಕಾಗಿ ಸಲಕರಣೆಗಳನ್ನು ಸಂಗ್ರಹಿಸಲು ಅಪ್ಪಣೆ ಹೊಂದಿದ್ದನು.

ಸೊಲೊಮೋನನ ನಾಯಕತ್ವದಲ್ಲಿ, ಅತ್ಯುತ್ತಮವಾದ ಮತ್ತು ಬಹು ಬೆಲೆಯುಳ್ಳ ವಸ್ತುಗಳಿಂದ, ಬಹಳ ಜಾಗರೂಕತೆಯಿಂದ ಮತ್ತು ಕಲೆಯಿಂದ ಆಲಯವು ಕಟ್ಟಲ್ಪಟ್ಟಿತು. ಕಲ್ಲಿನಿಂದ ಕಟ್ಟಲ್ಪಟ್ಟಿದ್ದರೂ, ದೇವದಾರು ಕಟ್ಟಿಗೆಯಿಂದ ಒಳಭಾಗವು ಆವರಿಸಿದ್ದು ಚಿನ್ನದ ತಗಡುಗಳಿಂದ ಹೊದಿಸಲ್ಪಟ್ಟಿತ್ತು. ಅದು ದೇವದರ್ಶನ ಗುಡಾರಕ್ಕಿಂತ ಎರಡು ಪಟ್ಟು ದೊಡ್ಡದಾಗಿತ್ತು (1 ಅರಸುಗಳು 5:1-9:9; 2 ಪೂರ್ವಕಾಲವೃತ್ತಾಂತ 2-7) ಮತ್ತು ಪೂರ್ತಿಯಾಗಲು ಏಳುವರೆ ವರ್ಷ ತೆಗೆದುಕೊಂಡಿತು. ಮೊರೀಯ ಬೆಟ್ಟದ ಮೇಲೆ ಕಟ್ಟಲ್ಪಟ್ಟಿದ್ದು, ಬಹುಶ ಅದು ಅಬ್ರಹಾಮನು ಇಸಾಕನನ್ನು ಅರ್ಪಿಸಲು ಬಂದ ಸ್ಥಳದಲ್ಲಿ ಇತ್ತು.

ಹತ್ತು ಸಾವಿರ[1] ಇಸ್ರಾಯೇಲ್ಯರು ದೇವಾಲಯಕ್ಕಾಗಿ ಕೆಲಸ ಮಾಡಲು ಒತ್ತಾಯಿಸಲ್ಪಟ್ಟರು (1 ಅರಸುಗಳು 5:13, 14) ಮತ್ತು 150,000 ಇಸ್ರಾಯೇಲ್ಯದವರು ಕೆಲಸದವರಾಗಿ ಉಪಯೋಗಿಸಲ್ಪಟ್ಟರು (1 ಅರಸುಗಳು 5:15; 2 ಪೂರ್ವಕಾಲವೃತ್ತಾಂತ 8:7-10). ಇಸ್ರಾಯೇಲ್ಯರಲ್ಲದವರು ಯುದ್ಧದಲ್ಲಿ ತೆಗೆದುಕೊಳ್ಳಲ್ಪಟ್ಟವರು, ಸಾಲದಲ್ಲಿ ಮಾರಲ್ಪಟ್ಟವರು, ಇಲ್ಲವೇ ಮನೆಯಲ್ಲಿ ಜನಿಸಿದ ಸೇವಕರು ಆಗಿದ್ದರು. ಅವರು ಎರಡು ಗುಂಪುಗಳಲ್ಲಿ ವಿಭಾಗಿಸಲ್ಪಟ್ಟಿದ್ದರು - ಎಪ್ಪತ್ತು ಸಾವಿರ ಜನರು ಭಾರಹೋರುವವರು ಮತ್ತು ಎಂಭತ್ತು ಸಾವಿರ ಜನರು ಕಲ್ಲುಗಣಿಗಳಲ್ಲಿ ಕೆಲಸ ಮಾಡುವವರು. ಈ ಎಲ್ಲಾ ಕೆಲಸದವರ ಮೇಲ್ವಿಚಾರಕರ ಸಂಖ್ಯೆ 3,850.[2] ಬೇರೆ ಮಾತುಗಳಲ್ಲಿ, ಒಟ್ಟು 163,850 ಜನರು ದೇವಾಲಯವನ್ನು ಕಟ್ಟಲು ಸತತವಾಗಿ ಕೆಲಸ ಮಾಡಿದರು. ಕಾರ್ಮಿಕರ ಮತ್ತು ಮೇಲ್ವಿಚಾರಕರ ಈ ಅಗಾಧವಾದ ದೊಡ್ಡ ಸಂಖ್ಯೆಯು ಈ ಕಟ್ಟಡದ ಯೋಜ

ನೆಯು ಎಷ್ಟು ದೊಡ್ಡದಾಗಿತ್ತು ಎಂಬುದನ್ನು ಸೂಚಿಸುತ್ತದೆ.

ದೇವಾಲಯದ ಪ್ರತಿಷ್ಠೆಯ ಸಮಯದಲ್ಲಿ ಸೊಲೊಮೋನನ ಪ್ರಾರ್ಥನೆಯು (2 ಪೂರ್ವಕಾಲವೃತ್ತಾಂತ 6:3-42) ಪರಿಶುದ್ಧ ಬರಹಗಳಲ್ಲಿಯ ಅತ್ಯುತ್ತಮ ಪ್ರಾರ್ಥನೆಗಳಲ್ಲಿ ಒಂದಾಗಿದೆ. ತನ್ನ ಪ್ರಾರ್ಥನೆಯ ಅಂತ್ಯದಲ್ಲಿ, ಅವನು ಕರ್ತನಿಗೆ ಯಜ್ಞದಲ್ಲಿ 22,000 ಹೋರಿಗಳನ್ನೂ 120,000 ಕುರಿಗಳನ್ನೂ ಅರ್ಪಿಸಿದನು (1 ಅರಸುಗಳು 8:62, 63; 2 ಪೂರ್ವಕಾಲವೃತ್ತಾಂತ 7:4, 5). ವೃತ್ತಾಂತಕಾರನು ಹೀಗೆ ಹೇಳಿದ್ದಾನೆ, “ಸೊಲೊಮೋನನು ಪ್ರಾರ್ಥಿಸುವದನ್ನು ಮುಗಿಸಿದ ಕೂಡಲೆ ಆಕಾಶದಿಂದ ಬೆಂಕಿಬಿದ್ದು ಸರ್ವಾಂಗ ಹೋಮದ್ರವ್ಯಗಳನ್ನೂ ಯಜ್ಞಮಾಂಸವನ್ನೂ ದಹಿಸಿಬಿಟ್ಟಿತು, ಯೆಹೋವನ ತೇಜಸ್ಸು ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸು ಆತನ ಆಲಯದಲ್ಲಿ ತುಂಬಿಕೊಂಡದ್ದರಿಂದ ಯಾಜಕರು ಒಳಗೆ ಪ್ರವೇಶಿಸಲಾರದೆ ಹೋದರು” (2 ಪೂರ್ವಕಾಲವೃತ್ತಾತ 7:1, 2).

ಕ್ರಿ.ಪೂ. 586ರಲ್ಲಿ ನೆಬುಕದ್ನೆಚ್ಚರನು ಅವನನ್ನು ನಾಶಮಾಡುವವರೆಗೆ ದೇವಾಲಯವು ಇಸ್ರಾಯೇಲ ಜನಾಂಗಕ್ಕೆ ಕರ್ತನ ಭವ್ಯವಾದ ಮನೆಯಾಗಿ ನಿಂತುಕೊಂಡಿತು.

ಹಳೇ ಒಡಂಬಡಿಕೆಯ ದೇವಾಲಯವು ದೇವರಿಗಾಗಿ ಕಟ್ಟಲ್ಪಟ್ಟ ಅತೀ ದೊಡ್ಡ ಕಟ್ಟಡವಾಗಿತ್ತು ಎಂದು ಒಬ್ಬನು ಸುಲಭವಾಗಿ ಯೋಚಿಸಬಹುದು, ಆದರೆ ಇದು ವಿಷಯವಾಗಿರುವದಿಲ್ಲ. ಇದಕ್ಕಿಂತ ಹೆಚ್ಚು ದೊಡ್ಡದಾದ ಕಟ್ಟಡವು ಯೇಸುವಿನಿಂದ ದೇವರಿಗಾಗಿ ಕಟ್ಟಲ್ಪಟ್ಟಿತು. ಹೊಸ ಒಡಂಬಡಿಕೆಯ ಬರಹಗಾರರಿಂದ ಇದು, “ಸಭೆ” ಎಂದು ಕರೆಯಲ್ಪಟ್ಟಿದೆ, ಮತ್ತು ಜಗತ್ತಿನ ಇತಿಹಾಸದಲ್ಲಿ ದೇವರಿಗಾಗಿ ಎಂದಾದರೂ ಕಟ್ಟಲ್ಪಟ್ಟ ಅತೀ ಅದ್ವಿತೀಯವಾದ ಹಾಗೂ ಮಹಿಮೆಯುಳ್ಳ ರಚನೆಯಾಗಿದೆ.

ಎಫೆಸ 2ರಲ್ಲಿ ಪೌಲನು ಕ್ರಿಸ್ತನ ಹೊರಗೆ ಇರುವದರ ಮತ್ತು ಒಬ್ಬನು ಕ್ರೈಸ್ತನಾಗಿರುವದರ ಮಧ್ಯದಲ್ಲಿಯ ಹೊಸ ಒಡಂಬಡಿಕೆಯಲ್ಲಿರುವ ತೀಕ್ಷಣವಾದ ವಿರೋಧಗಳಲ್ಲಿಯ ಒಂದನ್ನು ಕೊಟ್ಟಿದ್ದಾನೆ. “ಮೊದಲು - ಇಲ್ಲವೇ ನಂತರದ” ಚಿತ್ತದ ರೂಪದಲ್ಲಿಯ ಭಿನ್ನತೆಯನ್ನು ಅವನು ವಿವರಿಸಿದನು. ಉದಾಹರಣೆಯಾಗಿ, ಒಬ್ಬನು ಕ್ರೈಸ್ತನಾಗುವ ಮೊದಲು ಅವನು ಸತ್ತವನಾಗಿದ್ದಾನೆಂದು ಪೌಲನು ಹೇಳಿದನು. ಈ ಲೋಕದ ರೀತಿಯಲ್ಲಿ ಅವನು ನಡೆಯುತ್ತಿರುವನು ಸೈತಾನನ ಬಲದಲ್ಲಿ ಇರುವನು, ಅವಿಧೇಯತೆಯ ಮಕ್ಕಳಂತೆ ಜೀವಿಸುತ್ತಿರುವನು (ಎಫೆಸ 2:1-3). ಒಬ್ಬನು ಕ್ರೈಸ್ತನಾದ ಮೇಲೆ ಅವನು ಕ್ಷಮಿಸಲ್ಪಟ್ಟಿರುವನೆಂದು ಪೌಲನು ಹೇಳಿದನು. ಅವನು ಕ್ರಿಸ್ತನಲ್ಲಿರುವನು, ಮತ್ತು ಕೃಪೆಯಿಂದ ರಕ್ಷಿಸಲ್ಪಟ್ಟಿರುವನು (ಎಫೆಸ 2:4-10). ಪೌಲನು ಈ ವಿರುದ್ಧವಾದದ್ದನ್ನು ಮುಕ್ತಾಯಗೊಳಿಸಿದಂತೆ, ಕ್ರಿಸ್ತನಲ್ಲಿರುವ ಒಂದಾಗುವಿಕೆಗೆ, ನಾವು ಅನ್ಯರಾಗಿರಲೀ ಇಲ್ಲವೇ ಯೇಹೂದ್ಯರಾಗಲಿ, ಅವನು ಉಲ್ಲೇಖಿಸಿದನು. ಹಾಗೆ ಮಾಡುವಲ್ಲಿ, ಸಭೆಯನ್ನು ಸಂಬಂಧಿಸಿ ಮೂರು ಸಂಕೇತಗಳನ್ನು ಉಪಯೋಗಿಸಿದನು: ಒಂದು ಪಟ್ಟಣ (2:19), ಒಂದು ಕುಟುಂಬ (2:19), ಮತ್ತು ಒಂದು ಕಟ್ಟಡ (2:20, 21). ದೇವರ ಕಟ್ಟಡದಂತೆ ಸಭೆಯ ಬಗ್ಗೆ ಅವನ ವಿವರಣೆಯು ಪರಿಶುದ್ಧಾತ್ಮನಿಂದ ನಮಗೆ ಕೊಡಲ್ಪಟ್ಟ ಸಭೆಯ ಅತೀ ಸುಂದರವಾದ ವಿವರಣೆಗಳಲ್ಲಿ ಒಂದಾಗಿದೆ.

> ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು

> ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ. ಯೇಸುಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು; ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ (ಎಫೆಸ 2:19-22).

ಚಿತ್ರದಂತಿರುವ ಅಲಂಕಾರಿಕ ಭಾಷೆಯಲ್ಲಿ, ಪರಿಶುದ್ಧಾತ್ಮನು ಸಭೆಯನ್ನು ದೇವರ ಕಟ್ಟಡ ಎಂದು ಕರೆದನು. ಈ ರೂಪಕದ ಮುಖಾಂತರ ಸಭೆಯನ್ನು ನೋಡಿ, ಅದರ ವಿಶಿಷ್ಟವಾದ ಸ್ವಭಾವವು ಜ್ಞಾಪಕಕ್ಕೆ ಬರುವುದು.

## ಒಂದು “ಮಾನವ” ಕಟ್ಟಡ

ಹಳೇ ಒಡಂಬಡಿಕೆಯ ದೇವಾಲಯದಂತೆ ಇರದೇ, ಸಭೆಯು ದೇವರ ಹೊಸ ಒಡಂಬಡಿಕೆಯ ಕಟ್ಟಡವು ಜನರಿಂದ ಮಾಡಲ್ಪಟ್ಟಿರುತ್ತದೆ. ಪ್ರತಿಯೊಬ್ಬ ಕ್ರೈಸ್ತನು ವಸ್ತುಗಳನ್ನು ಒದಗಿಸುವನು, ಅದರಿಂದ ಕಟ್ಟಡವು ರಚಿಸಲ್ಪಡುತ್ತದೆ.

ಕ್ರೈಸ್ತರಾದ ಅನ್ಯರು ಇನ್ನು ಮೇಲೆ ಅಪರಿಚಿತರೂ ಪರದೇಶದವರೂ ಆಗಿರುವದಿಲ್ಲ, ಆದರೆ ಪರಿಶುದ್ಧರೊಂದಿಗೆ ಜೊತೆ ನಾಗರಿಕರೂ, ದೇವರ ಮನೆಯವರೂ, ಯೇಸುವು ತಾನೇ ಮೂಲೆಗಲ್ಲಾಗಿರುವದರೊಂದಿಗೆ, ಅಪೊಸ್ತಲರ ಮತ್ತು ಪ್ರವಾದಿಗಳ, ಅಸ್ತಿವಾರದ ಮೇಲೆ ಕಟ್ಟಲ್ಪಟ್ಟ ಕುಟುಂಬವೂ ಆಗಿರುವರೆಂದು ಪೌಲನು ಹೇಳಿದ್ದಾನೆ. ಕ್ರೈಸ್ತರು ಯೆಹೂದ್ಯರೇ ಆಗಿರಲಿ ಇಲ್ಲವೇ ಅನ್ಯರೇ ಆಗಿರಲಿ, ದೇವರ ಕಟ್ಟಡದಲ್ಲಿ ಒಂದಾಗಿ ಜೋಡಿಸಲ್ಪಟ್ಟಿದ್ದಾರೆ. 1 ಪೇತ್ರ 2:5ರಲ್ಲಿ ಪೇತ್ರನು ಅಂಥದೇ ಹೋಲಿಕೆ ಮಾಡಿದ್ದಾನೆ: “ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ... ಪರಿಶುದ್ಧ ಯಾಜಕವರ್ಗದವರಾಗಿದ್ದೀರಿ, ...”

ಸಭೆಯು ಒಂದು ಕಟ್ಟಡವಾಗಿದೆ, ಆದರೆ ಅದು ಕ್ರೈಸ್ತರಾದ ಜನರಿಂದ ಮಾಡಲ್ಪಟ್ಟ ಆತ್ಮಿಕ ಕಟ್ಟಡವಾಗಿದೆ. ಪ್ರತಿಯೊಬ್ಬ ಕ್ರೈಸ್ತನು ಕಟ್ಟಡದಲ್ಲಿ ಆತ್ಮಿಕ ಕಲ್ಲು ಆಗಿದ್ದಾನೆ. ಎಲ್ಲಾ ಕ್ರೈಸ್ತರು, ಸಜೀವ ಕಲ್ಲುಗಳಂತೆ, ದೇವರ ಆತ್ಮನಿಂದ ಅಲಂಕಾರಿಕವಾಗಿ ಒಂದು ಕಟ್ಟಡಕ್ಕೆ ಹೋಲಿಸಲ್ಪಟ್ಟ, ಅದೃಶ್ಯವಾದ, ಶಕ್ತಿಶಾಲಿಯಾದ, ಆತ್ಮಿಕ ದೇಹದಲ್ಲಿ ಒಂದಾಗಿ ಕೂಡಿಸಲ್ಪಟ್ಟಿದ್ದಾರೆ ಇಲ್ಲವೇ ಭದ್ರಪಡಿಸಲ್ಪಟ್ಟಿದ್ದಾರೆ.

ನೂರಾರು ಚಿಕ್ಕ ಸಂಘಟನೆಗಳು ಒಂದು ದೈತ್ಯ ಕಟ್ಟಡವನ್ನು ಮಾಡಲು ಒಂದಾಗಿ ಸೇರಿಸಲ್ಪಟ್ಟಿರುವವು ಎಂಬುದು ಪೌಲನ ಚಿತ್ರವಾಗಿರುವದಿಲ್ಲ. ಹೊಸ ಒಡಂಬಡಿಕೆಯು ವಿಶ್ವದ ಸಭೆಯನ್ನು ಜಗತ್ತಿನ ಎಲ್ಲಾ ಸಭಾಪಂಗಡಗಳಿಂದ ಆದದ್ದು ಎಂಬಂತೆ ವಿವರಿಸುವದಿಲ್ಲ. ಆದರೆ ಕ್ರಿಸ್ತನ ಸಭೆಯ ಪ್ರತಿಯೊಂದು ಸಭೆಯು, ವಿಶ್ವದ ಸಭೆಯ ಸ್ಥಳಿಕ ಪ್ರತ್ಯಕ್ಷತೆಯಂತೆ, ತನ್ನಲ್ಲಿ ಮತ್ತು ತನ್ನಷ್ಟಕ್ಕೆ ತಾನೇ ಸಂಪೂರ್ಣವಾದದ್ದಾಗಿರುವಂತೆ ಅದು ವಿವರಿಸುತ್ತದೆ.[3] ವಿಶ್ವದ ಸಭೆಯು ಜಗತ್ತಿನಲ್ಲೆಲ್ಲಾ ಇರುವ ವೈಯಕ್ತಿಕ ಕ್ರೈಸ್ತರಿಂದ, ಪ್ರತಿಯೊಬ್ಬರು ಈ ಆತ್ಮಿಕ ಕಟ್ಟಡದಲ್ಲಿ, ಸಭೆಯಲ್ಲಿ ಸಜೀವ ಕಲ್ಲುಗಳಂತೆ ಸೇವೆ ಮಾಡುತ್ತ, ಮಾಡಲ್ಪಟ್ಟಿರುತ್ತದೆ.

ಸಭೆಯನ್ನು ಭೌತಿಕ ಕಟ್ಟಡದೊಂದಿಗೆ ಇಲ್ಲವೇ ಆರಾಧನೆಯ ಸ್ಥಳದೊಂದಿಗೆ ಎಂದೂ ಗಲಿಬಿಲಿಗೊಳಿಸತಕ್ಕದ್ದಲ್ಲ. ಹೊಸ ಒಡಂಬಡಿಕೆಯು ಸಭೆಯ ಕಟ್ಟಡಗಳ ಬಗ್ಗೆ (ದೇವಾಲಯಗಳ ಬಗ್ಗೆ) ಒಂದೇ ಒಂದು ನಿರ್ದಿಷ್ಟವಾದ ಸಾಲನ್ನು ಒಳಗೊಂಡಿರುವದಿಲ್ಲ. ಕ್ರೈಸ್ತರು ಆರಾಧನೆಗಾಗಿ ಕ್ರಮಪ್ರಕಾರವಾಗಿ ಸಭೆಯಾಗಿ ಕೂಡಿ ಬರಬೇಕೆಂದು

ಆಜ್ಞಾಪಿಸಲ್ಪಟ್ಟಿದ್ದಾರೆ (ಇಬ್ರಿಯ 10:25), ಮತ್ತು ಈ ಆಜ್ಞೆಯು ಸಮೂಹವಾಗಿ ಕೂಡಿ ಬರಲಿಕ್ಕಾಗಿ ಒಂದು ಸ್ಥಳವನ್ನು ಅನ್ವಯಿಸುತ್ತದೆ; ಆದರೆ ಇತರ ಸಂಗತಿಗಳಲ್ಲಿ ಈ ಸ್ಥಳವು ಒಂದು ಮನೆ, ಒಂದು ಬಹಿರಂಗ ಸ್ಥಳ, ಇಲ್ಲವೇ ಆ ಉದ್ದೇಶಕ್ಕಾಗಿ ಪ್ರತ್ಯೇಕಿಸಲ್ಪಟ್ಟ ಒಂದು ಕಟ್ಟಡವಾಗಿರುವುದು ಆರಾಧನೆಯ ಸ್ಥಳದ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಯಾವುದೇ ವಿವರವಾದ ಸೂಚನೆಗಳು ಕೊಡಲ್ಪಟ್ಟಿರುವದಿಲ್ಲ. ಪ್ರತಿಯೊಂದು ಸ್ಥಳದಲ್ಲಿರುವ ಕ್ರೈಸ್ತರ ತೀರ್ಮಾನಕ್ಕೆ ಮತ್ತು ಆಯ್ಕೆಗೆ ಬಿಡಲ್ಪಟ್ಟಿದೆ. ಅವರು ಆರಾಧನೆಗಾಗಿ ಕ್ರಮಪ್ರಕಾರವಾಗಿ ಕೂಡಿಬರುವದಕ್ಕಾಗಿ ಒಂದು ಕಟ್ಟಡವನ್ನು ಕಟ್ಟುವದಕ್ಕಾಗಿ ಆಯ್ಕೆಮಾಡಿಕೊಳ್ಳಬಹುದು, ಇಲ್ಲವೇ ಒಂದು ಮನೆಯಲ್ಲಿ ಇಲ್ಲವೇ ಒಂದು ಬಹಿರಂಗ ಸ್ಥಳದಲ್ಲಿ ಕೂಡಿಬರುವದನ್ನು ಆಯ್ದುಕೊಳ್ಳಬಹುದು. ಸಭೆಯು ದೇವರ ಕಟ್ಟಡವು, ಒಂದು ಸ್ಥಳದಲ್ಲಿ ಇರುವ ಕ್ರೈಸ್ತರಾಗಿದ್ದಾರೆ, ಆದರೆ ಅವರು ಆರಾಧಿಸುವ ಸ್ಥಳ ಆಗಿರುವದಿಲ್ಲ ಎಂಬುದನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳತಕ್ಕದ್ದು.

ಪೌಲನ ಪ್ರಕಾರವಾಗಿ, ಕ್ರೈಸ್ತರು ತಮ್ಮನ್ನು ದೇವರ ಮನೆಯಂತೆ ನೋಡಿಕೊಳ್ಳತಕ್ಕದ್ದು, ಮತ್ತು ಪ್ರತಿಯೊಬ್ಬ ಕ್ರೈಸ್ತನು ತನ್ನನ್ನು ಆ ಮನೆಯ ಮಹತ್ವದ ಭಾಗವಾಗಿ ನೋಡಿ ಕೊಳ್ಳತಕ್ಕದ್ದು. ಒಬ್ಬ ಕ್ರೈಸ್ತನು ಬೀದಿಯಲ್ಲಿ ನಡೆದು ಹೋಗುತ್ತಿರುವಂತೆ, ನೋಡು ವವನು ಅವನ ಬಗ್ಗೆ, "ದೇವರ ಕಟ್ಟಡದಲ್ಲಿ, ಸಭೆಯಲ್ಲಿ ಒಬ್ಬ ಜೀವಿಸುವ ಕಲ್ಲು ಹೋಗು ತ್ತಿರುವವನು" ಎಂದು ಅವನ ಬಗ್ಗೆ ಹೇಳಬಹುದು.

ದೇವರ ಸಭೆಯನ್ನು ಕ್ರೈಸ್ತರಿಂದ ಜಗತ್ತು ನಿರ್ಣಯಿಸುವುದು, ಒಂದು ಕಟ್ಟಡದಿಂದ ಇಲ್ಲವೇ ಕ್ರೈಸ್ತರು ಆರಾಧಿಸುವ ಸ್ಥಳದಿಂದ ಅಲ್ಲ. ನಾವು ದೇವರ ಕಟ್ಟಡದಂತೆ ಜೀವಿ ಸುವದನ್ನು, ಕ್ರಿಸ್ತನ ಸಭೆಯಲ್ಲಿ ನಮ್ಮ ಸ್ಥಾನದೊಂದಿಗೆ ಸಾಮರಸ್ಯದಲ್ಲಿ ಜೀವಿಸುವದನ್ನು ನಿಶ್ಚಿತಪಡಿಸಿಕೊಳ್ಳೋಣ.

## ಒಂದು "ಸಜೀವ" ಕಟ್ಟಡ

ಸಭೆಯು ಒಂದು "ಮಾನವ" ಕಟ್ಟಡವಾಗಿದೆ ಎಂಬ ಸಂಗತಿಯು, ಸಭೆಯು ಒಂದು "ಜೀವಿಸುವ" ಕಟ್ಟಡವಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹಳೇ ಒಡಂಬಡಿಕೆಯ ಸೊಲೊಮೋನನ ದೇವಾಲಯವು ದೇವದಾರು, ಬಂಗಾರ, ಬೆಳ್ಳಿ, ಹಸ್ತಿದಂತಗಳಂಥ ಜೀವವಿಲ್ಲದ ವಸ್ತುಗಳಿಂದ ಮಾಡಲ್ಪಟ್ಟಿದೆ. ಆದರೆ ಸಭೆಯು, ದೇವರ ಕಟ್ಟಡವು ಜೀವಿಸುವ ಕಲ್ಲುಗಳಿಂದ ಮಾಡಲ್ಪಟ್ಟಿದೆ.

ಪೌಲನು ಸಭೆಯನ್ನು ಎಂದೂ ಒಂದು ಸಂಸ್ಥೆಯಂತೆ ಉಲ್ಲೇಖಿಸಲಿಲ್ಲ. ಉದಾಹರಣೆಯಾಗಿ, ನಮ್ಮ ಮುಂದಿರುವ ವಾಕ್ಯಭಾಗದಲ್ಲಿ ಸಭೆಯು ಸಜೀವವಾದದ್ದೂ ಕ್ರೈಸ್ತರಿಂದ ಮಾಡಲ್ಪಟ್ಟ ಆತ್ಮಿಕ ಕಟ್ಟಡವೂ ಅಂದರೆ ಜೀವಿಸುವಂಥದ್ದೂ ಮತ್ತು ಬೆಳೆ ಯುವಂಥದ್ದು - ಕಂಪಿಸುವ ಅಸ್ತಿತ್ವವು ಆಗಿರುವದನ್ನು ಅನ್ವಯಿಸಿದನು. ಸಾಮಾನ್ಯ ಆಸಕ್ತಿಗಳಿಂದ ಒಂದಾಗಿ ಎಳೆಯಲ್ಪಟ್ಟ ಒಂದು ಗುಂಪು ಮಾತ್ರ ಆಗಿರುವದಿಲ್ಲ ಎಂದು ತೋರಿಸಿದನು.

ಪೌಲನು ಬರೆದ ಕಟ್ಟಡಕ್ಕೆ ಮೇಲ್ಭಾಗ ಇರುವದಿಲ್ಲ. ಅದಕ್ಕೆ ಗೋಡೆಗಳೂ ಮತ್ತು ಅಸ್ತಿವಾರವೂ ಇರುತ್ತದೆ, ಆದರೆ ಮೇಲ್ಛಾವಣಿ ಇರುವದಿಲ್ಲ. ಕ್ರೈಸ್ತರು ಗೋಡೆಗಳಾ ಗಿರುತ್ತಾರೆ, ಮೂಲೆಗಲ್ಲಿನಂತೆ ಯೇಸುವಿನೊಂದಿಗೆ ಅಪೊಸ್ತಲರು ಮತ್ತು ಪ್ರವಾದಿಗಳು ಒಳಗೊಂಡು ಅಸ್ತಿವಾರ ಇರುತ್ತದೆ. ಕ್ರಿಸ್ತನು ಮೂಲೆಕಲ್ಲಿನಂತೆ, ಇಡೀ ಕಟ್ಟಡವನ್ನು ಒಟ್ಟಾಗಿ ಬಂಧಿಸುತ್ತಾನೆ. ಜನರು ಕರ್ತನಿಗಾಗಿ ಮಾರ್ಪಾಟು ಹೊಂದಿದಂತೆ, ಅವರು

ಈ ಕಟ್ಟಡದ ಗೋಡೆಗಳಿಗೆ ಕೂಡಿಸಲ್ಪಡುತ್ತಾರೆ; ಮತ್ತು ಇದು ಸತ್ಯವಾಗಿರುವದರಿಂದ ಪ್ರತೀ ಸಲ ಹೊಸ ಕ್ರೈಸ್ತರು ಜನಿಸುವಾಗ ಕಟ್ಟಡವು ಸತತವಾಗಿ ಎತ್ತರವಾಗಿ ಇನ್ನೂ ಎತ್ತರವಾಗಿ ಬೆಳೆಯುತ್ತದೆ. ಎಫೆಸ 2:21ರಲ್ಲಿ "ಬೆಳೆಯುವುದು" ಎಂದು ಭಾಷಾಂತರಿಸಿದ ಪದವು ಹೊಸ ಒಡಂಬಡಿಕೆಯಲ್ಲಿ, ಇನ್ನೊಂದು ಸಲ ಮಾತ್ರ ಎಫೆಸ 4:16ರಲ್ಲಿ ಉಪಯೋಗಿಸಲ್ಪಟ್ಟಿದೆ. ಇಡೀ ದೇಹದ ಬೆಳವಣಿಗೆಯಲ್ಲಿ ಪರಿಣಾಮಗೊಳ್ಳುವ ಸಜೀವ ಅನ್ಯೋನ್ಯತೆಯಲ್ಲಿ ದೇಹದ ಪ್ರತಿಯೊಂದು ಭಾಗದ ಒಂದಾಗಿ ಬಂಧಿಸುವಿಕೆಯನ್ನು ಉಲ್ಲೇಖಿಸಲು ಉಪಯೋಗಿಸಲ್ಪಟ್ಟಿರುವುದು.

ಅಪೊಸ್ತಲರ ಕೃತ್ಯಗಳು 2ರಲ್ಲಿ ಸಭೆಯ ಬಗ್ಗೆ ಲೂಕನು ಬರೆದನು; "ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು" (ವಚನ 41). ಎರಡು ಅಧ್ಯಾಯಗಳ ನಂತರ ಅವನು ಹೀಗೆ ಹೇಳಿದನು, "ಆದರೆ ವಾಕ್ಯವನ್ನು ಕೇಳಿದವರಲ್ಲಿ ಅನೇಕರು ನಂಬಿದರು; ಗಂಡಸರ ಸಂಖ್ಯೆ ಸುಮಾರು ಐದು ಸಾವಿರ ತನಕ ಬೆಳೆಯಿತು" (ಅಪೊಸ್ತಲರ ಕೃತ್ಯಗಳು 4:4). ಸಮಯದ ಸ್ವಲ್ಪ ಅವಧಿಯಲ್ಲಿ, ದೇವರ ಕಟ್ಟಡವು ಅದರಲ್ಲಿಯ ಮೂರು ಸಾವಿರ ಸಜೀವ ಕಲ್ಲುಗಳ ಸಂಖ್ಯೆಯು ಐದು ಸಾವಿರಕ್ಕೆ ಬೆಳೆಯಿತು. ಆ ಸಮಯದಿಂದ ಮಧ್ಯೆ ಬಂದ ವರ್ಷಗಳ ಮುಖಾಂತರವಾಗಿ, ದೇವರ ಕಟ್ಟಡವು ಬೆಳೆಯುವದರಲ್ಲಿ ಮುಂದುವರಿದಿದೆ. ಅದು ಕಳೆದ ವರ್ಷ ಈ ಸಮಯದಲ್ಲಿ ಇದ್ದುದಕ್ಕಿಂತ ಹೆಚ್ಚು ದೊಡ್ಡದಾಗಿದೆ. ಯೇಸುವು ಹಿಂದಿರುಗಿ ಬರುವವರೆಗೆ ಅದು ಬೆಳೆಯುತ್ತಲೇ ಮುಂದುವರಿಯುವುದು.

ಪೇತ್ರನು ಕ್ರೈಸ್ತರನ್ನು "ಜೀವಿಸುವ ಕಲ್ಲುಗಳು" (1 ಪೇತ್ರ 2:5) ಎಂದು ಉಲ್ಲೇಖಿಸಿದನು, ಮತ್ತು ಪೌಲನು ಅವರನ್ನು "ಸಜೀವ ಯಜ್ಞಗಳು" (ರೋಮಾಪುರ 12:1) ಎಂದು ಕರೆದನು. ನಿಶ್ಚಯವಾಗಿಯೂ, ದೇವರ ಈ ಕಟ್ಟಡದಲ್ಲಿರುವ ಪ್ರತಿಯೊಂದೂ ಜೀವಿಸುತ್ತದೆ. ಪರಿಶುದ್ಧ ಬರಹಗಳಲ್ಲಿ, ತಂದೆಯಾದ ದೇವರು "ಜೀವಿಸುವ ದೇವರು" ಎಂದು ಕರೆಯಲ್ಪಟ್ಟಿದ್ದಾನೆ (1 ಥೆಸಲೊನೀಕ 1:9). ಬೈಬಲು "ಸಜೀವವಾದದ್ದು, ಕಾರ್ಯಸಾಧಕವಾದದ್ದು" ಆಗಿದೆ (ಇಬ್ರಿಯ 4:12). ಪೇತ್ರನ ಪ್ರಕಾರವಾಗಿ ಯೇಸುವು "ಜೀವಿಸುವ ಕಲ್ಲು" ಆಗಿದ್ದಾನೆ (1 ಪೇತ್ರ 2:4) ಕ್ರೈಸ್ತರಿಗಿರುವ ನಿರೀಕ್ಷೆಯು ನಿಜವಾದದ್ದೂ ಅಧಿಕೃತವಾದದ್ದೂ ಆಗಿದೆ; ಮತ್ತು ಅದರ ಪರಿಣಾಮವಾಗಿ, ಅದು "ಜೀವಿಸುವ ನಿರೀಕ್ಷೆ"ಯಾಗಿದೆ (1 ಪೇತ್ರ 1:3). ಕ್ರೈಸ್ತರು ಕ್ರಿಸ್ತನಿಗೆ ತಮ್ಮ ವಿಧೇಯತೆಯ ಮುಖಾಂತರ ಪ್ರವೇಶಿಸಿದ ಮಾರ್ಗವು "ಜೀವವುಳ್ಳ ಹೊಸದಾರಿ" ಆಗಿರುವುದು (ಇಬ್ರಿಯ 10:20). ಯೇಸುವು ನಿತ್ಯವಾದ ಕ್ರಿಸ್ತನಂತೆ, ನಮ್ಮ ಮಧ್ಯಸ್ಥಗಾರನಂತೆ, ಪರಲೋಕದಲ್ಲಿ ನಮಗಾಗಿ ವಿಜ್ಞಾಪನೆ ಮಾಡಲು "ಯಾವಾಗಲೂ ಜೀವಿಸುತ್ತಾನೆ" (ಇಬ್ರಿಯ 7:25). ಕ್ರಿಸ್ತನಲ್ಲಿರುವ ನಮ್ಮ ಜೀವವನ್ನು ಮರಣವು ತೆಗೆದು ಹಾಕಲಾರದು ಎಂದು ನಮಗೆ ವಾಗ್ದಾನವು ಕೊಡಲ್ಪಟ್ಟಿದೆ, ಯಾಕಂದರೆ ನಾವು ಆತನಲ್ಲಿ ನಂಬಿಕೆಯಿಟ್ಟರೆ, ನಾವು ಸತ್ತರೂ ನಾವು ಬದುಕುವೆವು (ಯೋಹಾನ 11:26).

ಒಬ್ಬ ಕ್ರೈಸ್ತನು ಒಂದು ಸಂಘಟನೆಯ ಭಾಗವಾಗಿರುವದಿಲ್ಲ ಅವನು ಜೀವಿಸುವ, ಬೆಳೆಯುವ, ಆತ್ಮಿಕ ಮನೆಯಲ್ಲಿ ಜೀವಿಸುವ ಕಲ್ಲಾಗಿರುವನು. ನಾವು ಅನುದಿನವೂ ದೇವರ ಕಟ್ಟಡದ ಬೆಳವಣಿಗೆಗೆ ಮತ್ತು ಸೌಂದರ್ಯಕ್ಕೆ ಕೊಡುಗೆಗಳನ್ನು ಮಾಡುತ್ತಿರುವೆವು. ಬೆಳೆಯುವದನ್ನು ಎಂದೂ ನಿಲ್ಲಿಸದಂಥ ಮನೆಯನ್ನು ಮಾಡಲು ಇತರ ಕ್ರೈಸ್ತರೊಂದಿಗೆ ಒಂದಾಗಿ ಕೂಡಿಸಲ್ಪಡುತ್ತಿರುವೆವು. ನಾವು ಒಂದು ಆತ್ಮವನ್ನು ಕ್ರಿಸ್ತನ ಕಡೆಗೆ ನಡಿಸುವಾಗ, ದೇವರ ಮನೆಗೆ ನಾವು ಇನ್ನೊಂದು ಜೀವಿಸುವ ಇಟ್ಟಿಗೆಯನ್ನು

ಕೂಡಿಸುತ್ತಿರುವೆವು. ಇದಕ್ಕೆ ವಿರುದ್ಧವಾಗಿ, ಅದೇ ರೀತಿಯಲ್ಲಿ ನಾವು ಇನ್ನೊಬ್ಬ ಕ್ರೈಸ್ತನನ್ನು ನಾಶಪಡಿಸುವಾಗ, ನಾವು ದೇವರ ಮನೆಯಿಂದ ಒಂದು ಜೀವಿಸುವ ಕಲ್ಲನ್ನು ತೆಗೆದು ಹಾಕುತ್ತಿರುವೆವು. ಪ್ರತಿಯೊಬ್ಬ ಕ್ರೈಸ್ತನು ಇತರ ಎಲ್ಲಾ ಕ್ರೈಸ್ತರೊಂದಿಗೆ ಕೂಡಿಸಲ್ಪಡುವೆವು; ನಾವು ಒಂದಾಗಿ ದೇವರಿಗಾಗಿ ಒಂದು ಕಟ್ಟಡವನ್ನು ಒದಗಿಸಲಾಗುವಂತೆ ನಾವು ಒಬ್ಬರಿಗೊಬ್ಬರು ಮತ್ತು ಒಬ್ಬರಿಗಾಗಿ ಒಬ್ಬರು ಜೀವಿಸುವೆವು.

## ಒಂದು "ಆತ್ಮ - ನಿವಾಸಸ್ಥಾನವಾದ" ಕಟ್ಟಡ

ಒಳಗೆ ವಾಸಿಸುವದಕ್ಕಾಗಿ ಮನೆಗಳು ಕಟ್ಟಲ್ಪಡುತ್ತವೆ, ಮತ್ತು ದೇವರ ಕಟ್ಟಡವು ಅದಕ್ಕೆ ವ್ಯತಿರಿಕ್ತವಾದದ್ದಾಗಿರುವದಿಲ್ಲ. ಆತನ ಆತ್ಮಿಕ ಮನೆಯು ಆತನ ಆತ್ಮನಿಂದ ವಾಸಿಸಲ್ಪಡುತ್ತದೆ.

"... ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" ಎಂದು ಪೌಲನು ಹೇಳಿದನು (ಎಫೆಸ 2:21, 22). "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" (1 ಕೊರಿಂಥ 3:16) ಎಂದು ಪೌಲನು ಕೊರಿಂಥದವರಿಗೆ ಹೇಳಿದನು.

ದೇವರಿಗೆ ಪರಲೋಕದಲ್ಲಿರುವಂತೆ ಭೂಮಿಯ ಮೇಲೆಯೂ ಆತನಿಗೆ ಒಂದು ವಾಸಿಸುವ ಸ್ಥಳವಿರುತ್ತದೆ. ಭೂಲೋಕದಲ್ಲಿ ಆತನಿಗೆ ವಾಸಿಸುವ ಸ್ಥಳವು ಸಭೆಯಾಗಿದೆ. ಆತನು ಆತ್ಮನ ಮೂಲಕವಾಗಿ ತನ್ನ ಕುಟುಂಬವನ್ನು ಸಂದರ್ಶಿಸುತ್ತಾನೆ ಮತ್ತು ಅದರ ಮಧ್ಯದಲ್ಲಿ ವಾಸಿಸುತ್ತಾನೆ. ಸಭೆಯು ಭೂಮಿಯ ಮೇಲೆ ದೇವರ ದೃಶ್ಯವಾದ ಭಾಗವಾಗಿದೆ; ದೇವರು ಅನುದಿನವೂ ತನ್ನ ಕಟ್ಟಡದ, ಸಭೆಯ ಮುಖಾಂತರವಾಗಿ ಜೀವಿಸುತ್ತಾನೆ ಮತ್ತು ಕಾರ್ಯಮಾಡುತ್ತಾನೆ.

ಅರ್ಕಾನ್ಸಸದ, ಸ್ಪ್ರಿಂಗ್‌ಡೇಲದಿಂದ, ಆರೂವರೆ ಮೈಲು ದೂರದಲ್ಲಿಯ ಒಂದು ಫಾರ್ಮಿನಲ್ಲಿ ಸೊನೊರಾ ಸಮುದಾಯದಲ್ಲಿ ಬೆಳೆದೆನು. ಅಲ್ಲಿಂದ ಒಂದು ನೀರಿನ ಕಾಲುವೆ ಮತ್ತು ಹೊಲವನ್ನು ದಾಟಿ, ಒಂದು ಹಳೇ ಮನೆಯಿತ್ತು. ನಾನು ಬೆಳೆಯುತ್ತಿದ್ದಾಗ ಬಹಳ ಸಮಯ ಅದು ಖಾಲಿಯಾಗಿತ್ತು. ಆ ಮನೆಯಲ್ಲಿ ವಯಸ್ಸಾದ ದಂಪತಿಗಳು ವಾಸಿಸುತ್ತಿದ್ದರು, ಅವರಲ್ಲಿ ಒಬ್ಬರು ವ್ಹೀಲ್ ಚೇರ್‌ನಲ್ಲಿರುತ್ತಿದ್ದರು. ದಂಪತಿಗಳ ಬಗ್ಗೆ ನನಗೆ ಜ್ಞಾಪಕವಿರುವದಿಲ್ಲ, ಯಾಕಂದರೆ ಅವರು ಆ ಹಳೇ ಮನೆಯಲ್ಲಿ ಜೀವಿಸಿದ್ದಾಗ ನಾನು ಬಹಳ ಚಿಕ್ಕ ಬಾಲಕನಾಗಿದ್ದೆನು. ಆ ದಂಪತಿಗಳು ತೀರಿ ಹೋದ ತರುವಾಯ, ಯಾವುದೇ ಕಾರಣಕ್ಕಾಗಿ ಖಾಲಿಯಾಗಿಯೇ ಇತ್ತು ಅನೇಕ ವರ್ಷಗಳ ನಂತರ ಅದು ಕೆಡವಿ ಹಾಕಲ್ಪಟ್ಟಿತು. ಬಹಳ ಸಮಯ ಅದು ಖಾಲಿಯಾಗಿದ್ದಾಗ ಆ ಹಳೇ ಮನೆಯಲ್ಲಿ ಹೋಗಿದ್ದದರ ಜ್ಞಾಪಕ ನನಗಿದೆ. ಆ ದಂಪತಿಗಳು ಬಿಟ್ಟು ಹೋದ ರೀತಿಯಲ್ಲಿಯೇ ಆ ಮನೆಯಿತ್ತು, ಮೇಜು, ಖುರ್ಚಿಗಳು, ಊಟದ ಪಾತ್ರೆಗಳು, ಹಾಸಿಗೆಗಳು, ಇತರ ವಸ್ತುಗಳು ಇಟ್ಟಲ್ಲಿಯೇ ಇದ್ದವು. ಕೆಲವು ಸಮಯದವರೆಗೆ ಖಾಲಿಯಿದ್ದುದರಿಂದ, ಧೂಳಿನ, ಕೊಳೆಯ ವಾಸನೆಯಿಂದ ತುಂಬಿತ್ತು. ವರ್ಷಗಳ ಮೊದಲು ಅಲ್ಲಿ ವಾಸಿಸುತ್ತಿದ್ದ ದಂಪತಿಗಳ ಜೀವನ ಮತ್ತು ಚಟುವಟಿಕೆಗಳ ಮೂಕ ಸಾಕ್ಷಿಯಾಗಿ ವರ್ತಮಾನ ಪತ್ರಿಕೆಗಳೂ ಮ್ಯಾಗಝೀನ್‌ಗಳೂ ಅಲ್ಲಿದ್ದವು. ಹಳೇ ಮನೆಯಲ್ಲಿ ಸುತ್ತಲೂ ನಾನು ನೋಡಿದಾಗ

ನನಗೆ ಬಂದ ಭಾವನೆಗಳಿಗೆ ಕಾರಣ ಆ ಮನೆಯಲ್ಲಿ ಜನರು ವಾಸಿಸದೇ ಇದ್ದದ್ದು ಆಗಿದೆ. ಸಲಕರಣೆಗಳಿಂದ ತುಂಬಿದ್ದು ಮನೆಯು ಜೀವವು ಇಲ್ಲದ ಮನೆಯಾಗಿತ್ತು. ಕೆಲ ಸಮಯ ಖಾಲಿಯಾಗಿದ್ದ ಮನೆಗಳು ಮತ್ತು ನಗುವ ಮತ್ತು ಪ್ರೀತಿಯಿಲ್ಲದ ಜೀವನದ ಮನೆಗಳು ಮತ್ತು ಚಿಂತಾಜನಕವಾದ ನೋಟಗಳಾಗಿರುತ್ತವೆ. ಅವು ಸಾಮಾನ್ಯವಾಗಿ ರಮ್ಯ ನೋಟಕ್ಕೆ ಒಂದು ಕಲೆಯಾಗುತ್ತವೆ.

ಆ ಹಳೆಯ ಮನೆಯಂತೆ, ಸಭೆಯು ಜನನಿವಾಸಸ್ಥಾನವಾಗಿರದೇ ಇದ್ದರೆ, ಅದು ಅದಿರುವಂತೆ ಬೆಲೆಯಿಲ್ಲದ್ದಾಗಿರುತ್ತದೆ. ಹೀಗಿದ್ದರೂ, ನಿಜವಾದ ಸಭೆಯು ಜೀವ ಮತ್ತು ಬಲವಿಲ್ಲದ ಖಾಲಿಯಾದ ಹಿಂದಿನ ಕಾಲದಿಂದ ಬಂದ ಸಾಂಪ್ರದಾಯಿಕ ಅವಶೇಷ ವಾಗಿರುವದಿಲ್ಲ; ಅದು ದೇವರ ಆತ್ಮನಿಂದ ವಾಸಿಸಲ್ಪಡುವಂಥದ್ದಾಗಿದೆ! ಯೇಸುವು ಅದನ್ನು ಜಗತ್ತಿನಲ್ಲಿ ವಾಸಿಸುವದಕ್ಕಾಗಿ ದೇವರಿಗಾಗಿ ಒಂದು ಸ್ಥಳವನ್ನಾಗಿ ಕಟ್ಟಿದನು.

ವಿಗ್ರಹಾರಾಧನೆಗಾಗಿ ರೋಮ್ ಸಾಮ್ರಾಜ್ಯದಲ್ಲೆಲ್ಲಾ ದೇವಾಲಯಗಳಿದ್ದವು. ಎಫೆಸದಲ್ಲಿ ಡಯಾನಾ, ಇಲ್ಲವೇ ಅರ್ತೆಮಿಸ್ ದೇವತೆಗಳ ಆಲಯಗಳಿದ್ದವು. ಯೂದಾಯತ್ವಕ್ಕೆ ಅದರ ದೇವಾಲಯ ಯೆರೂಸಲೇಮಿನಲ್ಲಿತ್ತು ಮತ್ತು ಅದರ ಸಭಾಮಂದಿರಗಳು ರೋಮನ್ ಜಗತ್ತಿನಲ್ಲೆಲ್ಲಾ ಚದರಿ ಇದ್ದವು. ಅಲ್ಲಿ ಅದರ ಸದಸ್ಯರು ದೇವರು ತಳ್ಳಿಬಿಟ್ಟ ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯಲು ಪ್ರಯತ್ನಿಸುತ್ತಿದ್ದರು. ಜಗತ್ತಿನಲ್ಲಿ ಅತೀ ಸುಂದರವಾದ ಹಾಗೂ ಭವ್ಯವಾದ ಆಲಯಗಳಲ್ಲಿ ದೇವರ ಆಲಯವಾಗಿದೆ. ಆತನ ಆಲಯವು ಕೈಗಳಿಂದ ಮಾಡಲ್ಪಟ್ಟಿದ್ದಲ್ಲ, ಆದರೆ ದೇವರು ತಾನೇ ಮಾಡಿದ್ದಾಗಿರುತ್ತದೆ; ಮನುಷ್ಯನ ಯಾವುದೇ ದೇವಾಲಯಗಳಿಗೆ ಸರಿಸಮಾನವಿಲ್ಲದ ಮಹಿಮೆ ಮತ್ತು ವೈಭವದೊಂದಿಗೆ ಅದು ಹೊಳೆಯುತ್ತದೆ, ಯಾಕಂದರೆ ದೇವರು ತಾನೇ ಅದರಲ್ಲಿ ವಾಸಿಸುತ್ತಾನೆ. ಅಪೊಸ್ತಲರ, ಪ್ರವಾದಿಗಳ ಇನ್ನಿತರರ ದೈವಿಕ ಅಸ್ತಿವಾರದ ಮೇಲೆ ಮತ್ತು ಮೂಲೆಗಲ್ಲಾದ ಯೇಸುವಿನೊಂದಿಗೆ ಪ್ರತಿಯೊಂದು ಜೀವಿಸುವ ಕಲ್ಲನ್ನು ಪ್ರತಿಯೊಬ್ಬ ಹೊಸದಾಗಿ ಹುಟ್ಟಿದ ಕ್ರೈಸ್ತನನ್ನು ಒಂದರ ಮೇಲೊಂದಾಗಿ ಇಡುತ್ತಾನೆ. ಪ್ರತಿಯೊಂದು ದೇವರ ಕೃಪೆಯ ಹಸ್ತದಿಂದ ಕಟ್ಟಡದ ಗೋಡೆಯಲ್ಲಿ ಯೋಗ್ಯ ಸ್ಥಳದಲ್ಲಿ ಎಲ್ಲಾ ಸಜೀವ ಕಲ್ಲುಗಳು ಸರಿಯಾಗಿ ಹೊಂದಿಕೊಳ್ಳುವಂತೆ ಇಡಲ್ಪಡುತ್ತವೆ. ಭಾರತದಲ್ಲಿ, ಆಫ್ರಿಕಾದಲ್ಲಿ, ಆಸ್ಟ್ರಿಯಾದಲ್ಲಿ, ಅಮೇರಿಕಾದಲ್ಲಿ, ಉಕ್ರೇನದಲ್ಲಿ, ರಶ್ಯಿಯಾದಲ್ಲಿ ಮತ್ತು ಜಗತ್ತಿನ ಎಲ್ಲಾ ಪ್ರದೇಶಗಳಲ್ಲಿ ಜನರು ಕ್ರಿಸ್ತನ ಕಡೆಗೆ ಮಾರ್ಪಟ್ಟಂತೆ ದಿನದಿನವೂ ಆತನು ಅವರ ಮೇಲೆ ಕಟ್ಟುತ್ತಾನೆ. ಆಗ, ಈ ಆತ್ಮಿಕವಾದ, ದೃಶ್ಯವಾದ, ಬೆಳೆಯು ತ್ತಿರುವ ಆಲಯದಲ್ಲಿ ತನ್ನ ಆತ್ಮನ ಮುಖಾಂತರ ದೇವರು ವಾಸಿಸುವನು.

ಈ ಸತ್ಯವು ಮಹಾ ಆಹ್ವಾನದೊಂದಿಗೆ ನಮ್ಮ ಹೃದಯಗಳೊಳಗೆ ಬರುವುದು. ಜಗತ್ತಿನಲ್ಲಿ ನಾವು ದೇವರ ಆಲಯವಾಗಿದ್ದೇವೆ. ನಾವು ಜ್ಞಾನದಿಂದ ಮತ್ತು ಪರಿಶುದ್ಧ ತೆಯಿಂದ, ವಿಧೇಯತೆಯಿಂದ ಮತ್ತು ನಂಬಿಕೆಯಿಂದ ಜೀವಿಸೋಣ.

## ಮುಕ್ತಾಯ

ಒಂದು ದೊಡ್ಡದಾದ ಹಾಗೂ ಮಹಿಮೆಯುಳ್ಳ ಸತ್ಯವು ಎಫೆಸ 2:19-22ರಲ್ಲಿ ಪೌಲನಿಂದ ಘೋಷಿಸಲ್ಪಟ್ಟಿತು: ಸಭೆಯು ದೇವರ ಕಟ್ಟಡವಾಗಿದೆ. ಈ ಕಟ್ಟಡದಂತೆ ಅದು "ಮಾನವತೆಯುಳ್ಳದ್ದು," "ಸಜೀವವಾದದ್ದು," ಮತ್ತು "ಆತ್ಮನು ವಾಸಿಸಿರುವಂಥದ್ದು" ಆಗಿದೆ.

ತಾನು ವಿದೇಶಕ್ಕೆ ಪ್ರಯಾಣವಾಗಿ ಹೋದಾಗ, ತನಗಾಗಿ ಒಂದು ಭವ್ಯವಾದ ವಾಸದ

ಮನೆಯನ್ನು ಕಟ್ಟಲು ಒಬ್ಬ ಐಶ್ವರ್ಯವಂತನು ಕಟ್ಟಡ ಕಟ್ಟುವ ಗುತ್ತಿಗೆದಾರರನ್ನು ನೇಮಿಸಿ ಕೊಂಡದ್ದರ ಬಗ್ಗೆ ಹೇಳಲ್ಪಡುತ್ತದೆ. ಕಟ್ಟಡದ ಯೇಜನೆಗೆ ಖರ್ಚಿಗಾಗಿ ದೊಡ್ಡ ಮೊತ್ತದ ಹಣವು ಸ್ವತಂತ್ರ ಉಪಯೋಗಕ್ಕಾಗಿ ಗುತ್ತಿಗೆದಾರನಿಗೆ ಕೊಡಲ್ಪಟ್ಟಿತು. ಕಟ್ಟಡ ಕಟ್ಟುವ ಸಂಪೂರ್ಣ ಜವಾಬ್ದಾರಿಕೆ ಅವನಿಗೆ ಕೊಡಲ್ಪಟ್ಟಿತು. ಕಟ್ಟುವ ಸಮಯದಲ್ಲಿ ಗುತ್ತಿಗೆದಾರನು ಬಲವಾದ, ಅವಲಂಭಿಸಬಹುದಾದ ಸಾಮಗ್ರಿಗಳಿಗೆ ಬದಲಾಗಿ ಕಳಪೆಯಾದ, ಕಡಿಮೆ ಬೆಲೆಯ ಸಾಮಗ್ರಿಗಳನ್ನು ಉಪಯೋಗಿಸಿದನು. ಎರಡು ರೀತಿಯ ಸಾಮಗ್ರಿಗಳ ಮಧ್ಯದಲ್ಲಿ ಉಳಿದ ಹಣವನ್ನು ತನ್ನ ಸ್ವಂತಕ್ಕಾಗಿ ಇಟ್ಟುಕೊಂಡನು. ಅವನು ತನ್ನ ರಹಸ್ಯವನ್ನು ಹಲಗೆಗಳ ಮತ್ತು ಬಣ್ಣದ, ಇಟ್ಟಿಗೆ ಮತ್ತು ಗಾರೆಯ, ನೆಲಗಳ ಮತ್ತು ಗೋಡೆಗಳ ಹಿಂದೆ ಅಡಗಿಸುವದರಲ್ಲಿ ಶಕ್ತನಾದನು. ಯಜಮಾನನು ಹಿಂದಿರುಗಿ ಬಂದಾಗ, ಮನೆಯು ಪೂರ್ತಿಗೊಳಿಸಲ್ಪಟ್ಟಿತ್ತು ಹಾಗೂ ವಾಸಮಾಡಲಿಕ್ಕೆ ಸಿದ್ಧವಾಗಿತ್ತು. ಯಜಮಾನನ ಯೋಜನೆಯಂತೆ ಮನೆಯು ಕಟ್ಟಲ್ಪಟ್ಟಿದೆಯೆಂದು ಹೊರಗಿನಿಂದ ಮನೆಯ ನೋಟವು ಕಂಡುಬಂದಿತು, ಆದರೆ ಮಾನವ ಕಣ್ಣಿಗೆ ಕಾಣದೇ ಇರುವಂಥದ್ದು ಸಾಕಷ್ಟಾಗಿರಲಿಲ್ಲ. ಕಡಿಮೆ ಬೆಲೆಯ ಬೋರ್ಡುಗಳು, ತೊಲೆಗಳು, ಪೈಪುಗಳು, ಹೆಂಚುಗಳು ಇತ್ಯಾದಿಗಳು ಇದ್ದವು. ಯಾಜಮಾನನು ಗುತ್ತಿಗೆದಾರನಿಗೆ ಬೀಗದಕೈಕೊಟ್ಟು, "ಈ ಮನೆಯನ್ನು ನಿನ್ನ ಸ್ವಂತದ ಮನೆಯನ್ನಾಗಿ ತಗೆದುಕೋ!" ಎಂದು ಹೇಳಿದಾಗ, ಗುತ್ತಿಗೆದಾರನಿಗೆ ಎಷ್ಟು ಆಶ್ಚರ್ಯ ಮತ್ತು ನಿರಾಶೆಯಾಗಿರಬಹುದು. ಗುತ್ತಿಗೆ ದಾರನು ಯಜಮಾನನ್ನು ಮೋಸಗೊಳಿಸಿದ್ದರಲ್ಲಿ ನಿಜವಾಗಿಯೂ ತನ್ನನ್ನೇ ಮೋಸಗೊಳಿಸಿಕೊಂಡಿದ್ದನು.

ಒಂದು ಮನೆಯನ್ನು *ಕಟ್ಟುವ* ಜವಾಬ್ದಾರಿಕೆ ನಮಗೆ ಕೊಡಲ್ಪಟ್ಟಿರುವದಿಲ್ಲ - ಒಂದು *ಮನೆಯಾಗಿರಲು* ನಾವು ನೇಮಿಸಲ್ಪಟ್ಟಿದ್ದೇವೆ! ನಾವು ಕೇವಲ ಯಾವುದೇ ಮನೆಯಾಗಿರಬೇಕಾಗಿರುವದಿಲ್ಲ, ಆದರೆ ದೇವರ ಮನೆಯೇ ಆಗಿರಬೇಕಾಗಿದೆ! ಕ್ರಿಸ್ತನೊಳಗೆ ಬರುವದರಲ್ಲಿ, ಸಜೀವ ಕಲ್ಲುಗಳಾಗಿ ದೇವರ ಕಟ್ಟಡದ ಭಾಗವಾ ಗಿರುವದರಲ್ಲಿ ನಾವು ಸೋತು ಹೋದರೆ, ದೇವರು ಮನುಷ್ಯನಿಗೆ ಕೊಟ್ಟ ಅತೀ ದೊಡ್ಡ ಅವಕಾಶಕ್ಕೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುವೆವು. ನಾವು ದೇವರ ಮನೆಯನ್ನು ಪ್ರವೇಶಿಸಿದರೆ, ಆದರೆ ದೇವರಿಂದ ರೂಪಿಸಲ್ಪಟ್ಟ ಕ್ರೈಸ್ತ ಜೀವನಕ್ಕೆ, ಅಲ್ಪವಾದ, ಸಾಕಷ್ಟಾಗಿರದ ಜೀವಿತವನ್ನು ಬದಲಾಗಿಟ್ಟುಕೊಂಡು, ದೇವರ ಮನೆಯಂತೆ ಜೀವಿಸುವಲ್ಲಿ ಸೋತುಹೋದರೆ, ಪುನಃ ನಾವು ನಮ್ಮನ್ನು ಮೋಸಪಡಿಸಿಕೊಳ್ಳುತ್ತೇವೆ, ಆತನು ವಾಸಿಸುವ ಸ್ಥಳದಂತೆ ಜೀವಿಸುವದರಿಂದ ದೇವರನ್ನು ಪ್ರತಿನಿಧೀಕರಿಸುವ ಅಮೂಲ್ಯವಾದ ಅವಕಾಶವನ್ನು ನಾವೇ ಕಳೆದುಕೊಳ್ಳುತ್ತೇವೆ.

ಸೊಲೊಮೋನನು ಮಾಡಿದಂತೆ ದೇವರಿಗಾಗಿ ನಾವು ಒಂದು ಕಟ್ಟಡವನ್ನು ಕಟ್ಟಲಾರೆವು, ಸಭೆಯು ದೇವರ ವಾಕ್ಯದ ಮುಖಾಂತರ ದೇವರ ಆತ್ಮನಿಂದ ಕಟ್ಟಲ್ಪಟ್ಟಿದೆ. ಹೀಗಿದ್ದರೂ ಸುವಾರ್ತೆಗೆ ನಮ್ಮ ಸಮರ್ಪಣೆಯ ಮುಖಾಂತರ ಮತ್ತು ನಮ್ಮ "ಸಜೀವ ಕಲ್ಲುಗಳನ್ನು" ಅನುದಿನವೂ ಸರಿಪಡಿಸುವದರ ಮುಖಾಂತರ ನಮ್ಮ ಜೀವಿತಗಳನ್ನು ಮೂಲೆಗಲ್ಲಿನಂತೆ ಯೇಸುವಿನೊಂದಿಗೆ ನಾವು ದೇವರ *ಕಟ್ಟಡವಾಗಿರಬಹುದು!*

ನೀವು ದೇವರ ಕಟ್ಟಡದ ಭಾಗವಾಗಿರುವಿರೋ?

ಟಿಪ್ಪಣಿಗಳು

[1]ಮೂವತ್ತು ಸಾವಿರ ಜನರು ಕೆಲಸಮಾಡಲು ಒತ್ತಾಯದಿಂದ ತರಲ್ಪಟ್ಟಿದ್ದರು. ಆದರೆ ಹತ್ತು ಸಾವಿರ ಜನರು ಪ್ರತಿಯೊಂದು ತಿಂಗಳು ಉಪಯೋಗಿಸಲ್ಪಟ್ಟರು. ಹೀಗೆ ಪ್ರತಿ ಮೂರು ತಿಂಗಳಲ್ಲಿ ಒಂದು ತಿಂಗಳು ಒತ್ತಾಯದಿಂದ ತರಲ್ಪಟ್ಟವರು ಕೆಲಸ ಮಾಡಿದರು (1 ಅರಸುಗಳು 5:13). [2]2 ಪೂರ್ವಕಾಲವೃತ್ತಾಂತ 2:18 ಕಾನಾನ್ಯ ಅಧಿಕಾರಿಗಳ ಸಂಖ್ಯೆಯನ್ನು 3,600 ಎಂದು ಕೊಡುತ್ತದೆ. 2 ಪೂರ್ವಕಾಲವೃತ್ತಾಂತ 8:10 ಇಸ್ರಾಯೇಲ ಅಧಿಕಾರಿಗಳ ಸಂಖ್ಯೆಯನ್ನು 250 ಎಂದು ಕೊಡುತ್ತದೆ ಇದು ಮೇಲಾಧಿಕಾರಿಗಳ ಒಟ್ಟು ಸಂಖ್ಯೆಯನ್ನು 3,850 ಎಂಬುದನ್ನು ಕೊಡುತ್ತದೆ. 1 ಅರಸುಗಳು 5:16 ಸಹಾಯಕ ಅಧಿಕಾರಿಗಳ ಸಂಖ್ಯೆಯನ್ನು 3,300 ಎಂದು ಕೊಡುತ್ತದೆ. 1 ಅರಸುಗಳು 9:23 ಮೇಲಾಧಿಕಾರಿಗಳ ಸಂಖ್ಯೆಯನ್ನು 550 ಎಂದು ಕೊಡುತ್ತದೆ. ಇದೂ ಸಹ ಮೇಲ್ವಿಚಾರಣಾ ಅಧಿಕಾರಿಗಳ ಸಂಖ್ಯೆಯನ್ನು 3,850 ಎಂದು ಕೊಡುತ್ತದೆ. ಹೀಗೆ 2 ಪೂರ್ವಕಾಲವೃತ್ತಾಂತ ಮತ್ತು 1 ಅರಸುಗಳು, ಮೇಲ್ವಿಚಾರಕ ಅಧಿಕಾರಿಗಳ ಸಂಖ್ಯೆಯನ್ನು ಸಮವಾಗಿಡುತ್ತವೆ, ಆದರೆ ಅವರು ಮೇಲ್ವಿಚಾರಕರನ್ನು ಭಿನ್ನವಾದ ದೃಷ್ಟಿಕೋನಗಳಿಂದ ನೋಡಿದರು. [3]F. F. Bruce, *The Epistle to the Ephesians* (Old Tappan, N.J.: Fleming H. Revell Co., 1961), 58.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಸೊಲೊಮೋನನಿಂದ ಕಟ್ಟಲ್ಪಟ್ಟ ದೇವಾಲಯವನ್ನು ವಿವರಿಸಿರಿ.
2. ಎಫೆಸ 2ನ್ನು ಉಪಯೋಗಿಸಿ, ಕ್ರೈಸ್ತೇತರನ ಮತ್ತು ಕ್ರೈಸ್ತನ ಮಧ್ಯದಲ್ಲಿಯ ವ್ಯತ್ಯಾಸಗಳು ವಿವರಿಸಿರಿ.
3. ಎಫೆಸ 2:20, 21ರಲ್ಲಿ ಯಾವ ಮೂರು ಸಂಕೇತಗಳಿಂದ ಸಭೆಯ ಐಕ್ಯತೆಯನ್ನು ಪೌಲನು ಚಿತ್ರೀಕರಿಸುತ್ತಾನೆ?
4. ದೇವರ ಆಲಯವು ಇಂದು "ಮಾನವ" ಕಟ್ಟಡವಾಗಿರುವುದು ಹೇಗೆ ಎಂಬುದನ್ನು ಚರ್ಚಿಸಿರಿ.
5. "ಜೀವಿಸುವ ಕಲ್ಲುಗಳು" ಎಂಬ ವ್ಯಕ್ತಪಡಿಸುವಿಕೆಯು ಯಾವುದಕ್ಕೆ - ಸಭೆಗಳಿಗೋ ಇಲ್ಲವೇ ವೈಯಕ್ತಿಕಗಳಿಗೂ - ಸಂಬಂಧಿಸಿರುತ್ತದೆ?
6. ಭೌತಿಕ ಸಭಾ ಕಟ್ಟಡವನ್ನು ಕುರಿತು ಹೊಸ ಒಡಂಬಡಿಕೆಯಲ್ಲಿ ಎಷ್ಟು ಮಾಹಿತಿ ಕೊಡಲ್ಪಟ್ಟಿದೆ?
7. ನಮ್ಮ ಆರಾಧನೆಯಲ್ಲಿ ಮತ್ತು ದೇವರಿಗೆ ನಮ್ಮ ಸೇವೆಯಲ್ಲಿ ಸಭೆಯ ಕಟ್ಟಡದ ಸ್ಥಾನವನ್ನು ಚರ್ಚಿಸಿರಿ.
8. ಸಭೆಯು ಹೇಗೆ "ಸಜೀವ" ಕಟ್ಟಡವಾಗಿದೆ?
9. ಸಭೆಗೆ ಗೋಡೆಗಳು ಮತ್ತು ಅಸ್ತಿವಾರವು ಇದ್ದು ಮೇಲ್ಛಾವಣಿ ಇರುವದಿಲ್ಲ ಹೇಗೆ ಎಂಬುದನ್ನು ವಿವರಿಸಿರಿ.
10. ಸಭೆಯು ಬೆಳೆಯುವ ಮಾರ್ಗಗಳ ಯಾದಿ ಮಾಡಿರಿ.
11. "ಪರಿಶುದ್ಧಾತ್ಮನಿಂದ ಆಂತರ್ಯದಲ್ಲಿ ವಾಸಿಸಲ್ಪಡುವುದು" ಎಂಬ ಪದ ಸಮೂಹದ ಅರ್ಥ ವಿವರಿಸಿರಿ.
12. ಕ್ರೈಸ್ತ ದೇವಾಲಯವನ್ನು ಅನ್ಯದೇವಾಲಯದೊಂದಿಗೆ ಹೋಲಿಸಿರಿ. ದೇವರ ಆತ್ಮನು ಮಾಡುವ ಭಿನ್ನತೆಯನ್ನು ಗುರುತಿಸಿರಿ.
13. ಮನೆಯನ್ನು *ಕಟ್ಟುವದಕ್ಕೆ* ಅಧಿಕಾರ ಕೊಡಲ್ಪಡುವುದು ಮತ್ತು ಮನೆಯಾಗಿರಲು ಅಧಿಕಾರ ಕೊಡಲ್ಪಡುವುದು ಇವುಗಳ ಮಧ್ಯದಲ್ಲಿಯ ಭಿನ್ನತೆಯನ್ನು ಚರ್ಚಿಸಿರಿ.

© 2009 Truth for Today